ದಿನಾಂಕ 14-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಆರ್.ಯು.ಪಿ ವಕೀಲರಿಂದಃ**

1. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ಪ್ರತಿವಾದಿಯು ಮಾಹಿತಿ ನೀಡಿ ಬರೆಸಿರುತ್ತಾರೆ. ನಿ.ಪಿ-6 ರ ಖರೀದಿ ಕರಾರು ಪತ್ರದಲ್ಲಿ ಇರುವ ಸಂಪೂರ್ಣ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸ ನಂಃ 36 ರ ಜಮೀನಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರ ಆಗಿರುತ್ತದೆ. ಸದರಿ ಜಮೀನು ಒಟ್ಟು 18 ಎಕರೆ 25 ಗುಂಟೆ ವಿಸ್ತೀರ್ಣ ಇದೆ. ಸದರಿ ಒಟ್ಟು ವಿಸ್ತೀರ್ಣದ ಪೈಕಿ 2 ಎಕರೆ 3 ಗುಂಟೆ ಜಮೀನಿಗೆ ಮಾತ್ರ ಖರೀದಿ ಕರಾರು ಪತ್ರ ಆಗಿರುತ್ತದೆ. ಒಟ್ಟು ಜಮೀನಿನ ಪಶ್ಚಿಮ ಭಾಗದ ಜಮೀನಿಗೆ ಸಂಬಂಧಿಸಿದಂತೆ ಖರೀದಿ ವ್ಯವಹಾರ ಆಗಿರುತ್ತದೆ. ದಾವಾ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ನಾನು ಪಹಣಿ ಪತ್ರಿಕೆಯನ್ನು ನೋಡಿದಾಗ ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ 3 ಗುಂಟೆ ಜಮೀನು ಇತ್ತು.

2. ನಿ.ಪಿ-6 ರ ಖರೀದಿ ಕರಾರು ಪತ್ರದಲ್ಲಿ ಸ ನಂಃ36 ರ ಜಮೀನಿನಲ್ಲಿ ಯಾವ ದಿಕ್ಕಿನ ಜಮೀನು ಖರೀದಿ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ ಎಂದು ನಮೂದಿಸಲಾಗಿರುತ್ತದೆ. ದಾವಾ ಶೆಡ್ಯೂಲ ಆಸ್ತಿಗೆ ಖರೀದಿ ಕರಾರು ವ್ಯವಹಾರ ಆಗುವ ಸಂದರ್ಭದಲ್ಲಿ ಯಾವುದೇ ವ್ಯಾಜ್ಯ ಇರಲಿಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ವಿಭಾಗ ಆದ ನಂತರ ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಪತ್ರವನ್ನು ಬರೆದುಕೊಡುತ್ತೇನೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಖರೀದಿ ಕರಾರು ಪತ್ರದಲ್ಲಿ ದಾವಾ ಶೆಡ್ಯೂಲ್ ಆಸ್ತಿಗೆ ಸಂಬಂದಿಸಿದಂತೆ ವ್ಯಾಜ್ಯಗಳು ಇರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನಮೂದು ಮಾಡಿರುವುದಿಲ್ಲ. ಪ್ರತಿವಾದಿಯ ಕುಟುಂಬಕ್ಕೆ ಹಣಕಾಸಿನ ಅಡಚಣೆ ಇದ್ದು ಮತ್ತು ದಾವಾ ಆಸ್ತಿಯು ಸುಮಾರು 8 ಕಿ ಮೀ ಗಳ ದೂರದಲ್ಲಿ ಇರುವುದರಿಂದ ವ್ಯವಸಾಯ ಮಾಡಲು ಅಡಚಣೆ ಇದೆ ಎಂದು ಹೇಳಿ

ಮಾರಾಟ ಮಾಡಲು ಒಪ್ಪಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಕಾರಣವನ್ನು ಖರೀದಿ ಕರಾರು ಪತ್ರದಲ್ಲಿ ನಮೂದಿಸಲಾಗಿದೆ. ಯಾವ ರೀತಿಯ ಹಣಕಾಸಿನ ತೊಂದರೆ ಇದೆ ಎಂದು ಖರೀದಿ ಕರಾರು ಪತ್ರದಲ್ಲಿ ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ಖರೀದಿ ಕರಾರಿನ ವ್ಯವಹಾರವು ನೀರಲಗಿ ಗ್ರಾಮದ ವಾದಿಯ ಮನೆಯಲ್ಲಿ ಆಗಿರುತ್ತದೆ. ಖರೀದಿ ಮಾತುಕತೆಯ ಸಂದರ್ಭದಲ್ಲಿ ಸುಮಾರು 8 ರಿಂದ 10 ಜನ



ಇದ್ದರು. ಸದರಿ ವ್ಯವಹಾರದಲ್ಲಿ ಭಾಗವಹಿಸಿದ್ದ ಎಲ್ಲಾ ವ್ಯಕ್ತಿಗಳ ಹೆಸರುಗಳು ನನಗೆ ಗೊತ್ತಿರುತ್ತದೆ. ಸದರಿ ಖರೀದಿ ವ್ಯವಹಾರದಲ್ಲಿ ಹಾದೆಪ್ಪ ತಂದೆ ಹಾದೆಪ್ಪ ದೊಡ್ಡಮನಿ, ಬಸವಣ್ಣೆಪ್ಪ ತಂದೆ ನಾಗಪ್ಪ ದೊಡ್ಡಮನಿ, ನಾನು ಹಾಜರಿದ್ದು, ಉಳಿದ 7 ಜನರ ಹೆಸರುಗಳು ನನಗೆ ಈಗ ನೆನಪಿಲ್ಲ. ಪ್ರತಿವಾದಿಯು ಕಾಲ್ವೆ ಕಲ್ಲಾಪುರ ಗ್ರಾಮದವರು. ಖರೀದಿ ಮಾತುಕತೆಯಲ್ಲಿ ಪ್ರತಿವಾದಿ ಮತ್ತು ಆಕೆಯ ಗಂಡ ಹಾಜರಿದ್ದರು. ಆಕೆಯ ಗ್ರಾಮದಿಂದ ಇತರರು ಬಂದಿರಲಿಲ್ಲ. ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.

4. ಸಾಕಷ್ಟು ವರ್ಷಗಳು ಕಳೆದಿರುವುದರಿಂದ ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಖರೀದಿ ವ್ಯವಹಾರದ ಮಾತುಕತೆಯು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಅದೇ ರೀತಿ ಖರೀದಿ ಕರಾರು ಪತ್ರವನ್ನು ಯಾವ ದಿನಾಂಕದಂದು ಬರೆಯಲಾಗಿದೆ ಎಂದು ಸಹ ಗೊತ್ತಿಲ್ಲ. ಖರೀದಿ ಕರಾರು ಪತ್ರಕ್ಕೆ, ಪ್ರತಿವಾದಿ, ಆಕೆಯ ಗಂಡ, ನಾನು, ಬಿ.ಎನ್ ದೊಡ್ಡಮನಿ, ಹೆಚ್.ಹೆಚ್ ದೊಡ್ಡಮನಿ ಎಂಬುವವರು ಸಹಿ ಮಾಡಿರುತ್ತಾರೆ. ಖರೀದಿ ಕರಾರು ಪತ್ರಕ್ಕೆ ವಾದಿಯು ಸಹ ಸಹಿ ಮಾಡಿರುತ್ತಾರೆ. ಖರೀದಿ ಕರಾರು ಪತ್ರಕ್ಕೆ ಮೊದಲನೇ ಸಾಕ್ಷಿದಾರನಾಗಿ ನಾನು ಸಹಿ ಮಾಡಿರುತ್ತೇನೆ. 2 ಮತ್ತು 3 ನೇಯವರಾಗಿ ನಿಖರವಾಗಿ ಯಾರು ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ. ಸುಮಂಗಲವ್ವ ಮತ್ತು ವಿರೂಪಾಕ್ಷಪ್ಪ ರವರು ಸಹಿ ಮಾಡಿದ ನಂತರ ನಾನು ಮತ್ತು ಇತರ ಸಾಕ್ಷಿದಾರರು ಸಹಿ

ಮಾಡಿರುತ್ತೇವೆ.  ವಾದಿಯು ಎಷ್ಟನೇಯವರಾಗಿ ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ.

5. ವಾದಿಗೆ ಸೇರಿದ ಮನೆತನದ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ಎಕರೆ 10 ಗುಂಟೆ ಜಮೀನು ಆತನ ಹೆಸರಿನಲ್ಲಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಸರ್ವೇ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಸದರಿ ವಾದಿಯ ಆಸ್ತಿಯಿಂದ ಸುಮಾರು ಒಂದು ಮೈಲಿ ದೂರದಲ್ಲಿದೆ. ದಾವಾ



ಆಸ್ತಿಗೆ ಸಂಬಂಧಿಸಿದಂತೆ ನಿ.ಪಿ-6 ರ ಖರೀದಿ ಕರಾರು ಪತ್ರವನ್ನು ಹೊರತುಪಡಿಸಿ ವಾದಿಯು ಇತರ ಪತ್ರ ವ್ಯವಹಾರಗಳನ್ನು ಮಾಡಿದ್ದಾನೋ ಅಥವಾ ಇಲ್ಲವೋ ಗೊತ್ತಿಲ್ಲ. ನನಗೆ ವಾದಿಯ ಆಸ್ತಿಗಳು ಮತ್ತು ಮನೆತನದ ಆಸ್ತಿಗಳ ಖರೀದಿ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

6.ವಾದಿಯು ನನ್ನ ಗ್ರಾಮದವರು. ವಾದಿಯು ನನ್ನ ಸ್ನೇಹಿತನಾಗಿರುತ್ತಾನೆ ಮತ್ತು ಒಳ್ಳೇಯ ಒಡನಾಟ ಇರುತ್ತದೆ. ದಾವಾ ಆಸ್ತಿ ಮತ್ತು ಅದರ ಅಕ್ಕಪಕ್ಕದ ಜಮೀನುಗಳು ಪ್ರಸ್ತುತ ಎಕರೆಗೆ 8 ರಿಂದ 10 ಲಕ್ಷ ಮೌಲ್ಯ ಇದೆ. ದಾವಾ ಆಸ್ತಿಯು ಒಟ್ಟು ರೂ.55,000/- ಪ್ರತಿಫಲಕ್ಕೆ ಮಾರಾಟ ಮಾಡುವಂತೆ ಖರೀದಿ ವ್ಯವಹಾರ ಆಗಿರುತ್ತದೆ. ನನ್ನ ಸಮಕ್ಷಮ ಸದರಿ ಖರೀದಿ ವ್ಯವಹಾರದ ಸಮಯದಲ್ಲಿ ಯಾವುದೇ ಹಣಕಾಸಿನ ವ್ಯವಹಾರವು ಆಗಿರುವುದಿಲ್ಲ. ವಾದಿಯು ಗ್ರಾಮದಲ್ಲಿ ಒಳ್ಳೇಯ ವ್ಯಾಪಾರ ಮತ್ತು ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯು ಬಡ್ಡಿ ವ್ಯವಹಾರದ ಸಲುವಾಗಿ ವಾದಿಯಿಂದ ಮತ್ತು ಗ್ರಾಮದ ಇತರ ಜನರಿಂದ ಸಾಲವನ್ನು ನೀಡುವಾಗ ಖಾಲಿ ಛಾಪಾ ಕಾಗದದ ಮೇಲೆ ಸಹಿಗಳನ್ನು ಪಡೆಯುತ್ತಾ ಬಂದಿರುತ್ತಾನೆ ಎಂದರೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಖರೀದಿ ಕರಾರು ಪತ್ರ ಆಗಿಲ್ಲ ಮತ್ತು ಪ್ರತಿವಾದಿ ಹಾಗೂ ಆಕೆಯ ಗಂಡ ಖರೀದಿ ಕರಾರು ಪತ್ರಕ್ಕೆ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ

ಸರಿಯಲ್ಲ. ಇಂದು ನ್ಯಾಯಾಲಯಕ್ಕೆ ನನ್ನನ್ನು ಸುಳ್ಳು ಸಾಕ್ಷಿ ನುಡಿಯುವಂತೆ ವಾದಿಯೇ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಮಾತಿನಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಖರೀದಿ ಕರಾರು ವ್ಯವಹಾರ ಮತ್ತು ಪತ್ರ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ



ಪರವಾಗಿ ಖರೀದಿ ಕರಾರು ಪತ್ರವನ್ನು ಬರೆದು ಕೊಡದೇ ಇದ್ದರೂ ಸಹ ವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ